## ಕರ್ನಾಟಕ ವಿಧಾನ ಪರಿಷತ್

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: :359
2. ಸದಸ್ಯರ ಹೆಸರು: :ಶ್ರೀ ಅ.ದೇವೇಗೌಡ (ಪದವೀಧರರ ಕ್ಷೇತ್ರ).
3. ಉತ್ತರಿಸಬೇಕಾದ ದಿನಾಂಕ: :07.07.2023
4. ಉತ್ತರಿಸುವವರು: :ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

| ಕ್ರ ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| 1. | ರಾಜ್ಯದಲ್ಲಿನ ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್‌ಗಳಲ್ಲಿನ ಗ್ರೂಪ್ 'ಸಿ' ಮತ್ತು ಗ್ರೂಪ್ 'ಡಿ' ಹುದ್ದೆಗಳು ಸಿಬ್ಬಂದಿಗಳ ವಯೋನಿವೃತ್ತಿಯಿಂದ ಕೆಲವು ವರ್ಷಗಳಿಂದ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು, |
| 2. | ಮಂಜೂರಾದ ಹುದ್ದೆಗಳಲ್ಲಿ ಖಾಲಿ ಇರುವ ಗ್ರೂಪ್ 'ಸಿ' ಮತ್ತು ಗ್ರೂಪ್ 'ಡಿ' ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ. | ಕರ್ನಾಟಕ ಜಿಲ್ಲಾ ಪರಿಷತ್‌ಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಹಾಗೂ ನ್ಯಾಯ ಪಂಚಾಯಿತಿ ಕಾಯ್ದೆ 1983 ರಡಿ ಹಿಂದಿನ ಜಿಲ್ಲಾ ಪರಿಷತ್‌ಗಳ ವ್ಯಾಪ್ತಿಯಲ್ಲಿನ ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿಪಿ 83 ಜಿಪಿವಿ 88 ದಿನಾಂಕ:28.10.1988 ರಲ್ಲಿ ರಚಿಸಲಾಗಿತ್ತಾದರೂ ಸಹ ಸದರಿ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಿದ ವಿವಿಧ ವರ್ಗದ ಹುದ್ದೆಗಳ ನೇರ ನೇಮಕಾತಿ ಕೋಟಾದಡಿ ಹುದ್ದೆಗಳನ್ನು ಜಿಲ್ಲಾ ಪಂಚಾಯುತ್/ತಾಲ್ಲೂಕು ಪಂಚಾಯತ್‌ಗೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು 2021 ರವರಗೂ ಕ್ರಮವಹಿಸಿರುವುದಿಲ್ಲ. ಇದರಿಂದಾಗಿ ಗಣನೀಯ ಪ್ರಮಾಣದ ಗ್ರೂಪ್ 'ಸಿ' ಮತ್ತು 'ಡಿ' ವೃಂದದ ಹುದ್ದೆಗಳು ಖಾಲಿ ಉಳಿದಿರುತ್ತವೆ.<br><br>ಜಿಲ್ಲಾ ಪಂಚಾಯಿತಿಗಳಲ್ಲಿ ಗ್ರೂಪ್ 'ಸಿ' ಮತ್ತು 'ಡಿ' ವೃಂದದಲ್ಲಿ ಕಾರ್ಯನಿರ್ವಹಿಸುತ್ತಿದ್ದ/ತ್ತಿರುವ ನೌಕರರುಗಳು ದಿನಗೂಲಿಯಿಂದ ಸಕ್ರಮಗೊಂಡವರು, ಅನುಕಂಪದ ಆಧಾರದ ಮೇಲೆ ನೇಮಕಾತಿ ಹೊಂದಿದವರು ಹಾಗೂ ಇತರೆ ಇಲಾಖೆಗಳಿಂದ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿದ್ದವರಾಗಿರುತ್ತಾರೆ. |

ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಗಳಲ್ಲಿ ಗಣನೀಯ ಪ್ರಮಾಣದ ಗ್ರೂಪ್ 'ಸಿ' ಮತ್ತು 'ಡಿ' ವೃಂದದ ಹುದ್ದೆಗಳು ಖಾಲಿ ಇರುವುದನ್ನು ಸರ್ಕಾರವು ಗಮನಿಸಿ, ಗ್ರೂಪ್-ಸಿ ವೃಂದದಲ್ಲಿ ಮಹತ್ವದ ಹುದ್ದೆಗಳಾದ ಪ್ರ.ದ.ಸ, ಶೀಘ್ರಲಿಪಿಗಾರರು ಮತ್ತು ದ್ವಿ.ದ.ಸ. ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಮಾಡುವ ಉದ್ದೇಶಕ್ಕೆ ಕರ್ನಾಟಕ ಸಾಮಾನ್ಯ ಸೇವೆ(ಪಂಚಾಯತ್ ರಾಜ್ ವಿಭಾಗ) (ವೃಂದ ಮತ್ತು ನೇಮಕಾತಿ) ನಿಯಮಗಳು 2020 ನ್ನು ಅಧಿಸೂಚನೆ ಸಂಖ್ಯೆ: ಗ್ರಾಅಪ 142 ಕೆಎಸ್ಎಸ್ 2016 ದಿನಾಂಕ:20.07.2021 ರಲ್ಲಿ ರಚಿಸಿ, ನೇರ ನೇಮಕಾತಿಗೆ ಅವಕಾಶ ಕಲ್ಪಿಸಲಾಗಿದೆ.

ಸದರಿ ನಿಯಮಗಳನುಸಾರ ನೇರ ನೇಮಕಾತಿ ಕೋಟಾದಡಿ ಲಭ್ಯವಾಗುವ ಶೀಘ್ರಲಿಪಿಗಾರರು, ಪ್ರ.ದ.ಸ. ಮತ್ತು ದ್ವಿ.ದ.ಸ. ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಕೋರಿಕೆ ಸಲ್ಲಿಸಲು ಪ್ರಸ್ತಾವನೆ ಸಿದ್ಧಪಡಿಸಲಾಗಿದ್ದು, ಆರ್ಥಿಕ ಇಲಾಖೆಯ ಸಹಮತಿಗೆ ಕಡತ ಮಂಡಿಸಲಾಗಿದೆ.

ಆದಾಗ್ಯೂ ನೇರ ನೇಮಕಾತಿ ಪ್ರಕ್ರಿಯೆಗಳು ಪ್ರಾರಂಭಗೊಂಡು ಅಂತಿಮಗೊಳ್ಳಲು ಇನ್ನೂ ಹೆಚ್ಚಿನ ಕಾಲಾವಕಾಶ ಅಗತ್ಯ ಇರುವುದನ್ನು ಗಮನಿಸಿ, ಎಲ್ಲಾ ಪ್ರಾದೇಶಿಕ ಆಯುಕ್ತರಿಗೆ ಪತ್ರ ಬರೆದು, ಆ ಕಛೇರಿಗಳ ಹಂತದಲ್ಲಿ ಅನುಕಂಪದ ನೇಮಕಾತಿಗೆ ಬಾಕಿ ಇರುವ ಪ್ರಸ್ತಾವನೆಗಳನ್ನು ಜಿಲ್ಲಾ ಪಂಚಾಯಿತಿಗಳಿಗೆ ಕಳುಹಿಸುವಂತೆ ತಿಳಿಸಲಾಗಿದೆ. ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪತ್ರ ಬರೆದು ಪ್ರಾದೇಶಿಕ ಆಯುಕ್ತರ ಕಛೇರಿಗಳಿಂದ ಸ್ವೀಕೃತವಾಗುವ ಅನುಕಂಪದ ನೇಮಕಾತಿ ಪ್ರಸ್ತಾವನೆಗಳನ್ನು ನಿಯಮಾನುಸಾರ ಪರಿಶೀಲಿಸಿ ಅನುಕಂಪದ ನೇಮಕಾತಿ ಮಾಡಲು ಕ್ರಮಕೈಗೊಳ್ಳುವಂತೆ ತಿಳಿಸಲಾಗಿದೆ.

ಪ್ರಸ್ತುತ ಲಭ್ಯವಿರುವ ಮಾಹಿತಿಯನ್ವಯ ಇದುವರೆಗೆ 141 ಪ್ರ.ದ.ಸ., 94 ದ್ವಿ.ದ.ಸ., 01 ವಾಹನ ಚಾಲಕ ಹಾಗೂ 60 ಗ್ರೂಪ್-ಡಿ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿ ಭರ್ತಿ ಮಾಡಲಾಗಿರುತ್ತದೆ.

| | | |
|---|---|---|
| 3. | ಖಾಲಿ ಹುದ್ದೆಗಳಲ್ಲಿ ಹೊರಗುತ್ತಿಗೆ ನೌಕರರು ಕರ್ತವ್ಯ ನಿರ್ವಹಿಸುತ್ತಿರುವುದು ಆಡಳಿತ ಹಿತದೃಷ್ಟಿಯಿಂದ ಸರಿಯಾದ ಕ್ರಮವೇ; ಇದನ್ನು ಹೋಗಲಾಡಿಸಲು ನೇಮಕಾತಿ ಮೂಲಕ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿ ಆಡಳಿತ ಸುವ್ಯವಸ್ಥಿತವಾಗಿ ನಡೆಯಲು ಸರ್ಕಾರ ಕ್ರಮ ಕೈಗೊಳ್ಳುವುದೇ?(ವಿವರ ನೀಡುವುದು) | ಕರ್ನಾಟಕ ಸಾಮಾನ್ಯ ಸೇವೆ(ಪಂಚಾಯತ್ ರಾಜ್ ವಿಭಾಗ) (ವೃಂದ ಮತ್ತು ನೇಮಕಾತಿ) ನಿಯಮಗಳು 2020 ರಲ್ಲಿ ಬೆರಳಚ್ಚುಗಾರರು, ವಾಹನ ಚಾಲಕರು ಹಾಗೂ ಗ್ರೂಪ್ 'ಡಿ' ಹುದ್ದೆಗಳನ್ನು ಭವಿಷ್ಯವರ್ತಿಯಾಗಿ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಅವಕಾಶ ಕಲ್ಪಿಸಿದ್ದು, ಇದು ಆರ್ಥಿಕ ಇಲಾಖೆಯು ನೀಡಿದ ಸಹಮತಿಯನ್ವಯ ಕೈಗೊಂಡ ಕ್ರಮವಾಗಿರುತ್ತದೆ. ಇದನ್ನು ಹೊರತುಪಡಿಸಿ ಗ್ರೂಪ್-ಸಿ ವೃಂದದಲ್ಲಿ ಮಹತ್ವದ ಹುದ್ದೆಗಳಾದ ದ್ವಿ.ದ.ಸ, ಪ್ರ.ದ.ಸ. ಮತ್ತು ಅಧೀಕ್ಷಕ ವೃಂದದ ಹುದ್ದೆಗಳ ಎದುರು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಅವಕಾಶ ಇಲ್ಲದಿರುವುದರಿಂದ. ಆಡಳಿತದ ಹಿತದೃಷ್ಟಿಗೆ ಧಕ್ಕೆಯಾಗುವ ಸಂಭವ ಇರುವುದಿಲ್ಲ. |

ಗ್ರಾಅಪ 149 ಕೆ.ಎಸ್.ಎಸ್ 2023(ಇ)

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು